**ಸಾಕ್ಷಿಯನ್ನು ದಿನಾಂಕಃ 24-10-2024 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಆರೋಪಿತರನ್ನು ಮೂಲ ಪ್ರಕರಣದಲ್ಲಿ ರಿಮಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ.

ತನಿಖೆ ಇನ್ನೂ ಪೂರ್ಣಗೊಂಡಿಲ್ಲವಾದ್ದರಿಂದ ದಿನಾಂಕ 04-08-2020 ರಂದು ಪುನಃ ಆರೋಪಿತರನ್ನು ಮೂಲ ಪ್ರಕರಣದಲ್ಲಿ ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಆರೋಪಿತರು ಈ ಹಿಂದೆ ತಮ್ಮ ಸ್ವ ಖುಷಿ ಹೇಳಿಕೆಯಲ್ಲಿ ಹೇಳಿರುವಂತೆ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹೂವಿನಹಿತ್ಲದ ಪಿರ್ಯಾದಿಯ ಮನೆಯಲ್ಲಿ ಹಣ ಮತ್ತು ಬಂಗಾರ ಕಳುವು ಮಾಡಿದ್ದು ಸದರಿ ಸ್ಥಳವನ್ನು ತೋರಿಸುವುದಾಗಿ ಹೇಳಿದ್ದರಿಂದ 2 ಜನ ಪಂಚರೊಡನೆ ಘಟನಾ ಸ್ಥಳಕ್ಕೆ ಹೋಗಿದ್ದು ಅಲ್ಲಿ ಆರೋಪಿತರು ಪಿರ್ಯಾದಿಯ ಮನೆಯನ್ನು ತೋರಿಸಿ ವಾಹನವನ್ನು ನಿಲ್ಲಿಸುವಂತೆ ಹೇಳಿ ಸದರಿ ಮನೆಯಲ್ಲಿ ತಾವು ಒಡವೆ ಕಳ್ಳತನ ಮಾಡಿರುವುದಾಗಿ ಹೇಳಿರುತ್ತಾರೆ. ನಂತರ ಅವರನ್ನು ಸದರಿ ಮನೆಗೆ ಕರೆದುಕೊಂಡು ಹೋಗಲಾಗಿ ಅವರು ಮನೆಯ ಹಿಂಬದಿಯ ಬಾಗಿಲನ್ನು ಕಬ್ಬಿಣದ ರಾಡ್‌ನಿಂದ ಒಡೆದು ಮನೆಯ ಒಳಗೆ ಹೋಗಿ ಕಪಾಟಿನಲ್ಲಿದ್ದ ಹಣ ಮತ್ತು ಬಂಗಾರವನ್ನು ಕಳ್ಳತನ ಮಾಡಿರುವುದನ್ನು ತೋರಿಸಿರುತ್ತಾರೆ. ಸದರಿ ಸ್ಥಳದಲ್ಲಿ ಈಗಾಗಲೇ ಮುಂದುವರಿಸಿಕೊಂಡು ಬಂದಿದ್ದ ಪಂಚನಾಮೆಯನ್ನು ಸದರಿ ಸ್ಥಳದಲ್ಲಿಯೂ ಮುಂದುವರೆಸಿ ಪಂಚನಾಮೆಯನ್ನು ಸಂಜೆ 04-10 ರಿಂದ 04-25 ರ ಸಮಯದಲ್ಲಿ ಬರೆದು ಫೋಟೋಗಳನ್ನು ತೆಗೆಸಿರುತ್ತೇನೆ.

ನಂತರ ಸದರಿ ಪಂಚನಾಮೆಯನ್ನು ಮುಂದುವರೆಸುತ್ತಾ ಇತರೇ ಪ್ರಕರಣದ ಸ್ಥಳಗಳಿಗೆ ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿದ್ದು ಅಲ್ಲಿಯೂ ಸಹ ಪಂಚನಾಮೆಯನ್ನು ಮುಂದುವರೆಸಿರುತ್ತೇನೆ. ಸದರಿ ಪಂಚನಾಮೆಯ ದೃಢೀಕೃತ ನಕಲನ್ನು ನೋಡುತ್ತಿದ್ದು ನಿಪಿ-18 ಎಂದು, ಸಾಕ್ಷಿ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-19 ಎಂದು ಗುರುತಿಸಲಾಯಿತು.

ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯಲ್ಲಿ ತಾವು ಕಳುವು ಮಾಡಿದ ಒಡವೆಗಳ ಪೈಕಿ ಕೆಲವು ಒಡವೆಗಳನ್ನು ಅಕ್ಕಸಾಲಿಗರಾದ ಚಾಸಾ-14 ರಿಂದ 16 ರವರ ಬಳಿ ಅಡವು ಇಟ್ಟಿರುವುದಾಗಿ ಹೇಳಿರುತ್ತಾರೆ. ಅದರಂತೆ ಚಾಸಾ-14 ರಿಂದ 16 ರವರನ್ನು ಠಾಣೆಗೆ ಕರೆಸಿ ಆರೋಪಿತರನ್ನು ತೋರಿಸಿ ಆರೋಪಿತರು ಒಡವೆ ಅಡವು ಇಟ್ಟಿರುವ ಬಗ್ಗೆ ವಿಚಾರಿಸಿರುತ್ತೇನೆ. ಅವರು ಒಪ್ಪಿಕೊಂಡಿರುತ್ತಾರೆ ಮತ್ತು ಅದೇ ದಿನ 05-08-2020 ರಂದು ಆರೋಪಿತರು ಗಿರವಿ ಇಟ್ಟಿದ್ದ ಒಡವೆಗಳನ್ನು ಠಾಣೆಗೆ ತಂದು ಹಾಜರುಪಡಿಸಿರುತ್ತಾರೆ. ಚಾಸಾ-14 ರಿಂದ 16 ರವರು ಹಾಜರು ಪಡಿಸಿದ ಒಡವೆಗಳನ್ನು ಬೆಳಿಗ್ಗೆ 11-30 ರಿಂದ 12-30 ರ ಸಮಯದಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅಕ್ಕಸಾಲಿಗರಾದ ಚಾಸಾ-17 ರ ಮೂಲಕ ತೂಕಮಾಡಿಸಿ ಪಂಚನಾಮೆಯಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-11, 12 ಮತ್ತು 14 ಎಂದು ಗುರುತಿಸಿದ್ದು, ಸಾಕ್ಷಿ ಸಹಿಗಳನ್ನು

ನಿಪಿ-11(ಸಿ), 12(ಸಿ) ಮತ್ತು 14(ಸಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ಒಂದು ಫೋಟೋ ತೆಗೆದಿದ್ದು ಫೋಟೋದ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ-13 ಎಂದು ಗುರುತಿಸಲಾಗಿದೆ. ಸದರಿ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಒಡವೆಗಳ ಪೈಕಿ 4 ಉಂಗುರಗಳು, 3 ಚೈನುಗಳು ಮತ್ತು ಒಂದು ಬಳೆ ಈ ಪ್ರಕರಣಕ್ಕೆ ಸಂಬಂಧಪಟ್ಟಿರುತ್ತದೆ. ಸದರಿ ಒಡವೆಗಳನ್ನು ಹಾಜರುಪಡಿಸಿದ ಬಗ್ಗೆ ರಸೀದಿ ಪತ್ರ ಪಡೆದಿರುತ್ತೇನೆ. ಸದರಿ ರಸೀದಿ ಪತ್ರ ನೋಡುತ್ತಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಗಿದೆ.

ಅದೇ ದಿನ ಚಾಸಾ-1 ರವರನ್ನು ಠಾಣೆಗೆ ಕರೆಸಿದ್ದು ಒಡವೆಗಳನ್ನು ತೋರಿಸಿದ್ದು ಒಡವೆ ಗುರುತಿಸಿದ ಬಗ್ಗೆ ಚಾಸಾ-1, 8 ಮತ್ತು 9 ರವರ ಮರುಹೇಳಿಕೆ ಪಡೆದಿರುತ್ತೇನೆ.

ಅದೇ ದಿನ ಚಾಸಾ-18 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 10-08-2020 ರಂದು ಚಾಸಾ-12 ರವರ ಹೇಳಿಕೆ ಪಡೆದಿರುತ್ತೇನೆ.

ದಿನಾಂಕ 14-08-2020 ರಂದು ಆರೋಪಿತರನ್ನು ಮೂಲ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 02-10-2020 ರಂದು ಚಾಸಾ-18 ರವರಿಂದ ಫೋಟೋ ತೆಗೆಸಿದ ಬಗ್ಗೆ ಕಲಂ 65-ಬಿ ಅಡಿ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಸದರಿ ಪ್ರಮಾಣಪತ್ರವನ್ನು ನೋಡುತ್ತಿದ್ದು ನಿಪಿ-20 ಎಂದು ಗುರುತಿಸಲಾಯಿತು.

ದಿನಾಂಕ 03-10-2020 ರಂದು ಕೇಸಿನ ಕಡತವನ್ನು ಚಾಸಾ-25 ರವರಿಗೆ ವಹಿಸಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡ ವಸ್ತುಗಳು ಮತ್ತು ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**